ಆದರೆ ಕಳೆದ ವರ್ಷ ಸನ್ಮಾನ್ಯ ಸದಸ್ಯರು ಇದೇ ವಿಷಯದ ಬಗ್ಗೆ ಇದೇ ನಿಯಮದಡಿಯಲ್ಲಿ ಪ್ರಸ್ತಾಪಿಸಿದಾಗ ನೀಡಿದ ಆಶ್ವಾಸನೆಗೆ ಅನುಗುಣವಾಗಿ ಮಾರ್ಗಸೂಚಿಯನ್ನು ಮಾರ್ಪಡಿಸಿ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 167 ಟಿಎನ್‌ಆರ್ 88 ದಿನಾಂಕ 16-4-96ರನ್ವಯ ಧಾನ್ಯರಹಿತ ಹುಲ್ಲಿನ ಬಣವೆಗಳೂ ಕೂಡ ಆಕಸ್ಮಿಕ ಅಗ್ನಿ ಅನಾಹುತವಾದಲ್ಲಿ, ವಾಸ್ತವಿಕ ನಷ್ಟದ ಶೇ.50ರಷ್ಟು, ಆದರೆ ಗರಿಷ್ಟ (ಒಂದು ಸಾವಿರ) 1000 ರೂ.ಗಳನ್ನು ಮೀರದಂತೆ ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿದೆ.

12-20 ಪಿ.ಎಂ.

ಗಮನ ಸೆಳೆಯುವ ಸೂಚನೆಗಳು

1) ವಿಷಯ:- ನಾರಾಯಣಪುರ ಎಡದಂಡೆ ಕಾಲುವೆಯ 45 ಹಾಗೂ 71ನೇ ಕಿಲೋಮೀಟರ್‌ನ ನಾಲೆಯ ಬಿರುಕುಗಳಿಂದ ರೈತರಿಗಾಗಿರುವ ತೊಂದರೆ.

ಶ್ರೀ ರಾಜಾ ವೆಂಕಟಪ್ಪ ನಾಯಕ್ (ಸುರಪುರ ಕ್ಷೇತ್ರ):- ಮಾನ್ಯ ಅಧ್ಯಕ್ಷರೆ, ನಾನು ನಾರಾಯಣಪುರ ಎಡದಂಡೆ ಕಾಲುವೆಯ 45 ಹಾಗೂ 71ನೇ ಕಿಲೋಮೀಟರ್‌ನ ನಾಲೆಯ ಬಿರುಕುಗಳಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ ಭಾರಿ ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ನಾನು ಭಾರಿ ನೀರಾವರಿ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ದಿನಾಂಕ 28-6-1996ರಂದು ಸಮಾವೇಶಗೊಂಡ ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ದಿನಾಂಕ 3-7-1996ರಂದು ನಾರಾಯಣಪುರ ಎಡದಂಡೆ ಕಾಲುವೆಗೆ 300 ಘನ ಅಡಿ ಪ್ರತಿ ಸೆಕೆಂಡಿಗೆ (ಕ್ಯೂಸೆಕ್ಸ್) ಪ್ರಮಾಣದಲ್ಲಿ ನೀರನ್ನು ಬಿಡಲಾಯಿತು.

ನಂತರ ಹಂತ ಹಂತವಾಗಿ ನೀರನ್ನು 1000 ಘನ ಅಡಿ ಪ್ರತಿ ಸೆಕೆಂಡಿಗೆ (1000 ಕ್ಯೂಸೆಕ್ಸ್) ದಿನಾಂಕ 4-7-1996ರವರೆಗೆ ಹೆಚ್ಚಿಸಲಾಯಿತು.

ಬೇಡಿಕೆಗೆ ಅನುಗುಣವಾಗಿ ದಿನಾಂಕ 5-7-1996ರಂದು ನೀರನ್ನು 2000 ಘನ ಅಡಿ ಪ್ರತಿ ಸೆಕೆಂಡಿಗೆ (ಕ್ಯೂಸೆಕ್ಸ್) ಮೊತ್ತಕ್ಕೆ ಹೆಚ್ಚಿಸಲಾಯಿತು. ದಿನಾಂಕ: 5-7-96ರಂದು ಖಾನಾಪುರ ವಿಭಾಗ ಕಮಾಂಡ್ ಏರಿಯಾದಲ್ಲಿ ಮಳೆಯು ಸಾಕಷ್ಟು ಆಗಿದ್ದರಿಂದ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ ನೀರನ್ನು ಕಡಿಮೆ ಮಾಡಬೇಕೆಂದು ರಾತ್ರಿ ಸ್ವತಃ ಬಂದು ಹೇಳಿದರು. ಹಾಗೂ ಮರು ದಿವಸ ಬೆಳಿಗ್ಗೆ ದಿನಾಂಕ 6-7-1996ರಂದು ಭೀಮರಾಯನಗುಡಿ ವಿಭಾಗದಲ್ಲಿ ಮಳೆಯು ಸಾಕಷ್ಟು ಆಗಿರುವುದರಿಂದ ನೀರನ್ನು ಕಡಿಮೆ ಮಾಡಬೇಕೆಂದು ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು ಸ್ವತಃ ಬಂದು

ಹೇಳಿದ್ದರಿಂದ 6-7-96ರಿಂದ ನೀರನ್ನು 2000 ಕ್ಯೂಸೆಕ್ಸ್‌ನಿಂದ 1000 ಕ್ಯೂಸೆಕ್ಸ್‌ದವರೆಗೆ ಕಡಿಮೆ ಮಾಡಲಾಯಿತು. ಮತ್ತು ದಿನಾಂಕ 7-7-96ರಂದು ಹುಣಸಗಿ ವಿಭಾಗದಲ್ಲಿ ಮಳೆಯು ಆಗಿದ್ದರಿಂದ ಮತ್ತೆ ದಿನಾಂಕ 7-7-96ರಂದು 500 ಕ್ಯೂಸೆಕ್ಸ್ ನೀರನ್ನು ಕಡಿಮೆ ಮಾಡಿ ನಾರಾಯಣಪುರ ಕಮಾಂಡಕ್ಕೆ ಬೇಕಾಗುವಷ್ಟನ್ನು ಅಂದರೆ 500 ಕ್ಯೂಸೆಕ್ಸ್ ಮಾತ್ರ ಕಿ.ಮೀ. 35ವರೆಗೆ ಬಿಡಲಾಯಿತು.

ಈ ಅವಧಿಯಲ್ಲಿ ದಿನಾಂಕ 5-7-96ರಂದು ನಾರಾಯಣಪುರ ಎಡದಂಡೆ ಕಾಲುವೆ ಕಿ.ಮೀ. 45ರಲ್ಲಿ ಸರ್ವೀಸ್ ರೋಡ್‌ನಲ್ಲಿ ಸ್ವಲ್ಪ ಕೊರತೆಯು ಆಗಿದ್ದು ಮತ್ತು ಕಿ.ಮೀ. 71ರಲ್ಲಿ ಎಮ್.ಸಿ.ಪಿ.ಸಿ.ಯಲ್ಲಿ ನೀರು ಸೋರುವುದು ಕಂಡು ಬಂದಿತು. ಇವುಗಳ ಹೊರತು ಕಿ.ಮೀ. 45 ಮತ್ತು ಕಿ.ಮೀ.71ರಲ್ಲಿ ಯಾವುದೇ ಬ್ರೀಚ್ ಆಗಿಲ್ಲ. ಇವೆರಡೂ ದುರಸ್ತಿಗಳು ಕಿ.ಮೀ 35ರ ಆಚೆಗೆ ಇರುವುದರಿಂದ ಮತ್ತೆ ಹುಣಸಿಗಿ, ಭೀಮರಾಯನಗುಡಿ ಮತ್ತು ಖಾನಾಪುರ ವಿಭಾಗಗಳು ಕಮಾಂಡಿನಲ್ಲಿ ನೀರಿನ ಬೇಡಿಕೆ ಇಲ್ಲದ್ದರಿಂದ ದಿನಾಂಕ 7-7-96ರಂದು ಈ ದುರಸ್ತಿ ಕೆಲಸವನ್ನು ತೆಗೆದುಕೊಂಡು ಅನುಕ್ರಮವಾಗಿ ಇವುಗಳಿಗೆ ದಿನಾಂಕ 10-7-96 ಮತ್ತು 11-7-96ರಂದು ಇವುಗಳ ದುರಸ್ತಿ ಕೆಲಸಗಳನ್ನು ಮುಗಿಸಲಾಯಿತು. ದಿನಾಂಕ 7-7-96ರಿಂದ ದಿನಾಂಕ :14-7-96ರವರೆಗೆ ದಿನವೂ ಹುಣಸಗಿ ಭೀಮರಾಯನಗುಡಿ ಮತ್ತು ಖಾನಾಪುರ ವಿಭಾಗಗಳ ಕಮಾಂಡಿನಲ್ಲಿಲ್ಲ. ಮಳೆಯು ದಿನವೂ ಆಗುತ್ತಿದ್ದು ನೀರಿನ ಬೇಡಿಕೆ ಇರಲಿಲ್ಲ. ದಿನಾಂಕ: 15-7-96ರಂದು ಭೀಮರಾಯನಗುಡಿ ವಿಭಾಗದಿಂದ ಮತ್ತು ಹುಣಸಗಿ ವಿಭಾಗದಿಂದ ನೀರಿನ ಬೇಡಿಕೆ ಬಂದಿದ್ದು ಮತ್ತೆ 700 ಕ್ಯೂಸೆಕ್ಸ್‌ದಷ್ಟು ನೀರನ್ನು ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಹೆಚ್ಚಿಸಲಾಗಿದೆ. ಈ ವರ್ಷ ಜೂನ್ 1996ರವರೆಗೆ ನಾರಾಯಣಪುರ ಎಡದಂಡೆ ಕಾಲುವೆಗೆ ಕಿ.ಮೀ. 40ರಿಂದ 75ರವರೆಗೆ ಮೆಂಟೆನೆನ್ಸ್‌ಗೆ ಮಾಡಿದ ಖರ್ಚಿನ ವಿವರ ಈ ಕೆಳಗಿನಂತಿದೆ:

ಕಿ.ಮೀ.ಗಳಲ್ಲಿ	ಖರ್ಚು ಮಾಡಿದ ವಿವರ ರೂ.ಗಳಲ್ಲಿ.
ಕಿ.ಮೀ. 40 ರಿಂದ 41 ರವರೆಗೆ	-
ಕಿ.ಮೀ. 42 ರಿಂದ 43 ರವರೆಗೆ	-
ಕಿ.ಮೀ. 44 ರಿಂದ 45 ರವರೆಗೆ	-
ಕಿ.ಮೀ. 46 ರಿಂದ 47 ರವರೆಗೆ	-
ಕಿ.ಮೀ. 48 ರಿಂದ 49 ರವರೆಗೆ	-
ಕಿ.ಮೀ. 50 ರಿಂದ 51 ರವರೆಗೆ	-
ಕಿ.ಮೀ. 52 ರಿಂದ 53 ರವರೆಗೆ	-

ಕಿ.ಮೀ. 54 ರಿಂದ 55 ರವರೆಗೆ	46,000.00
ಕಿ.ಮೀ. 56 ರಿಂದ 57 ರವರೆಗೆ	44,000.00
ಕಿ.ಮೀ. 58 ರಿಂದ 59 ರವರೆಗೆ	48,000.00
ಕಿ.ಮೀ. 60 ರಿಂದ 61 ರವರೆಗೆ	24,000.00
ಕಿ.ಮೀ. 61 ರಿಂದ 62 ರವರೆಗೆ	39,000.00
ಕಿ.ಮೀ. 62 ರಿಂದ 63 ರವರೆಗೆ	33,000.00
ಕಿ.ಮೀ. 63 ರಿಂದ 64 ರವರೆಗೆ	50,000.00
ಕಿ.ಮೀ. 64 ರಿಂದ 65 ರವರೆಗೆ	48,000.00
ಕಿ.ಮೀ. 65 ರಿಂದ 66 ರವರೆಗೆ	50,000.00
ಕಿ.ಮೀ. 66 ರಿಂದ 75 ರವರೆಗೆ	-
	3,82,000.00

ರೂ.ವನ್ನು ಈ ಒಂದು ನಿರ್ವಹಣೆಗೆ ಖರ್ಚು ಮಾಡಿರತಕ್ಕಂತದ್ದು.

(ಈ ಸಂದರ್ಭದಲ್ಲಿ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

+ ಶ್ರೀ ರಾಜಾ ವೆಂಕಟಪ್ಪ ನಾಯಕ್:- ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರವನ್ನು ಕೇಳವುದೇನೆಂದರೆ, ಈ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಏಕೆಂದರೆ ನೀರಾವರಿ ಸಲಹಾ ಸಮಿತಿಯಲ್ಲಿ ಮೂರನೆ ಜುಲೈಗೆ ನೀರನ್ನು ಬಿಡುತ್ತೇವೆಂದು ಹೇಳಿದ್ದರು, ಬಿಟ್ಟು, ಅವತ್ತಿನ ದಿವಸವೇ ವಿತ್‌ಡ್ರಾ ಮಾಡುತ್ತೇವೆಂದು ಹೇಳಿದರು. ಹದಿನಾಲ್ಕನೇ ತಾರೀಖು ಅಲ್ಲ, ಹದಿನೈದನೇ ತಾರೀಖಿನಂದು ನೀರನ್ನು ಬಿಟ್ಟಿದ್ದಾರೆ. ಈ ಮಧ್ಯೆ 45 ಮತ್ತು 71ನೇ ಕಿಲೋಮೀಟನ್‌ನಲ್ಲಿ ಬ್ರೀಚ್ ಆಗಿದೆ ಇದನ್ನು ಹೇಳುವುದಕ್ಕೆ ತಯಾರಿಲ್ಲ, ಅವರು ಹೇಳವುದೇ ಬೇರೆ. ಸುಮಾರು ಹತ್ತು ಲಕ್ಷ ರೈತರಿಗೆ ತೊಂದರೆಯಾಗುತ್ತಿದೆ. ಇಲ್ಲಿ ಸುರಪುರ, ಶಾಪುರ ಮತ್ತು ಯಾದ್ಗೀರ್, ಜೇವರ್ಗಿ ಸೇರಿದಂತೆ ಈ ಎಲ್ಲಾ ಕ್ಷೇತ್ರಕ್ಕೆ ಸೇರಿದ ರೈತರಿಗೆ ಪ್ರತಿವರ್ಷವೂ ಈ ತೊಂದರೆಯಾಗುತ್ತಿದೆ. ಪ್ರತಿ ವರ್ಷ ಒಂದಲ್ಲ ಒಂದು ಕಡೆ 45ರಿಂದ 71 ಕಿಲೋಮೀಟರ್‌ವರೆಗೆ ಬ್ರೀಚ್ ಆಗುತ್ತಲೇ ಇದೆ. ಆದುದರಿಂದ ಈ ಮುಖ್ಯ ನಾಲೆಯನ್ನು ದುರಸ್ತಿ ಮಾಡಿ ಒಂದು ಶಾಶ್ವತ ಪರಿಹಾರವನ್ನು ಕಂಡು ಹಿಡಿಯಬೇಕು. ಈಗ ತುಂಗಭದ್ರಾ ಎಡದಂಡೆ ನಾಲೆಗೆ ಯಾವ ರೀತ ಇಂಟರ್‌ನಲ್ ಸ್ಟೆಂತನಿಂಗ್‌ಗೋಸ್ಕರ ಮಾಡುತ್ತಿದ್ದಾರೆ. ಅದೇ ರೀತಿ ನಾರಾಯಣಪುರ ಎಡದಂಡೆ ನಾಲೆಯನ್ನು ಕೂಡ ಮಾಡಬೇಕೆಂದು ನನ್ನ ವಿನಂತಿ. ಪ್ರತಿ ವರ್ಷ ಈ ಹುಣಸಿ

ಡಿವಿಷನ್‌ನಲ್ಲಿ ಸಾಕಷ್ಟು ಕೆಲಸ ಅಂದರೆ ಈ ವರ್ಷ ನಾಲ್ಕು ಕೋಟಿ ರೂಪಾಯಿಗಳ ಕೆಲಸವನ್ನು ಆಪರೇಷನ್ ಮತ್ತು ಮೆಂಟಿನೆನ್ಸ್‌ಗೋಸ್ಕರ ತೆಗೆದುಕೊಂಡಿದ್ದಾರೆ. ಅಲ್ಲಿ ದುಡ್ಡನ್ನು ದುರುಪಯೋಗ ಮಾಡುತ್ತಿದ್ದಾರೆ. ಅಲ್ಲಿರತಕ್ಕಂಥ ಕಾರ್ಯಪಾಲಕ ಅಭಿಯಂತರ ಸರ್ಕಾರದ ಪರವಾಗಿಯೂ ಇಲ್ಲ ಮತ್ತೆ ರೈತರ ಪರವಾಗಿಯೂ ಇಲ್ಲ. ರೈತರು ಆ ಡಿವಿಷನ್‌ಗೆ ನೀರನ್ನು ಕೇಳವುದಕ್ಕೆ ಹೋದರೆ, ನನ್ನ ಹೆಸರು ಕೊಂಡಿ ಎಂದು, ಕೊಂಡಿ ಎಂದರೆ, ಮೀನಿಗೆ ಹಾಕುತ್ತಾರಲ್ಲಾ ಗಾಳ ಆರೀತಿ ಎಂದು ತಿಳಿದು ಆ ಮೀನು ಒದ್ದಾಡುವಂತೆ ಒದ್ದಾಡಿಸಬೇಕೆಂದು ನೇರವಾಗಿ ಆ ರೈತರಿಗೆ ಹೇಳುತ್ತಿದ್ದಾನೆ. ರೈತರಿಗೂ ತೊಂದರೆ ಕೊಡುತ್ತಿದ್ದಾರೆ, ಮತ್ತೆ ಇಲ್ಲಿ ಸಾಕಷ್ಟು ಬೋಗಸ್ ಬಿಲ್ಲುಗಳು ಆಗುತ್ತಿವೆ ಮೊನ್ನೆ ಹದಿನೇಳನೆ ತಾರೀಖಿನಂದು, ನೀರಾವರಿ ಮಂತ್ರಿಗಳು ತನಿಖೆಗೆ ಹಾಕುತ್ತೇವೆಂದು ಹೇಳಿದರು, ಇನ್ನೂವರೆಗೆ ಹಾಕಿಲ್ಲ. ಇದನ್ನು ತನಿಖೆಗೆ ಹಾಕಿ ಆದಷ್ಟು ಬೇಗ ತನಿಖೆ ಮಾಡಬೇಕೆಂದು ನನ್ನ ವಿನಂತಿ.

+ ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿದ ಹಾಗೆ ಆ ಕೆಲವು ಕಿಲೋಮೀಟರ್‌ಗಳಲ್ಲಿ ಬ್ರೀಚ್ ಆಗಿ, ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು ಮತ್ತು ಕಾಮಗಾರಿಯನ್ನು ಮಾಡಿಸಿ ಆ ಕಾಲುವೆಯನ್ನು ಬಂದೊಬಸ್ತ್ ಮಾಡಬೇಕೆಂದು ತಿಳಿಸಿದ್ದಾರೆ. ಆ ಬಗ್ಗೆ ಭಾರಿ ನೀರಾವರಿ ಸಚಿವರಾದ ಮಾನ್ಯ ನಾಗೇಗೌಡರಿಗೆ ತಿಳಿಸುತ್ತೇನೆ, ಮತ್ತು ಕಾಮಗಾರಿಯನ್ನು ಆದ್ಯತೆಯ ಮೇರೆಗೆ ತೆಗೆದುಕೊಂಡು, ಅಲ್ಲಿ ಪಕ್ಕಾ ಕೆಲಸವನ್ನು ಮಾಡಿಕೊಡುವಂಥ ಕಾರ್ಯವನ್ನು ಮಾಡುತ್ತೇವೆ. ಮತ್ತೆ, ಮಳೆ ಬಿದ್ದಿರುವುದರಿಂದ, ತಾವು ಹೇಳಿದ ಹಾಗೆ ಮಳೆ ಚೆನ್ನಾಗಿ ಆಗಿರುವುದರಿಂದ ಆ ಪ್ರದೇಶದಲ್ಲಿ ನೀರನ್ನು ಬಿಡುವ ಕಾರ್ಯದಲ್ಲಿ ಬಹಳಷ್ಟು ನೀರು ಬಿಡುವುದರ ಬದಲು ಕಡಿಮೆ ನೀರನ್ನು ಬಿಟ್ಟು ನೋಡಿದ್ದೇವೆ. ತಾವು ಹೇಳಿದ ಹಾಗೆ 45 ಹಾಗೂ 71ನೇ ಕಿಲೋಮೀಟರ್‌ನ ನಾಲೆಯ ಬಿರುಕುಗಳು ಏನಾಗಿದ್ದಾವೆ ಅದರ ನಿರ್ವಹಣೆ ಮತ್ತೆ ತಾವು ಹೇಳಿದ ಹಾಗೆ, ಪೇಮೆಂಟ್ ಕೊಡುವುದರಲ್ಲಿ ಏನು ಅಕ್ರಮ ಆಗಿದೆ ಅದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳುತ್ತೇವೆ. ಮತ್ತು ಈ ಬಿರುಕು ಬಿಟ್ಟಿರತಕ್ಕಂಥ ಭಾಗಗಳಲ್ಲಿ ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಹಾಗೂ ಇನ್ನು ಮುಂದೆ ಆ ರೀತಿ ಆಗದಿರುವಂತೆ ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ರಾಜಾ ವೆಂಕಟಪ್ಪನಾಯಕ್:- ಈ ಮುಖ್ಯ ನಾಲೆಯನ್ನು ದುರಸ್ತಿಗೊಳಿಸುವುದಕ್ಕೋಸ್ಕರ ಸರ್ಕಾರ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಈಗ ಬಿಡತಕ್ಕಂಥ ನೀರಿನ ಪ್ರಮಾಣ ಮೂರೂವರೆ ಸಾವಿರ ಕ್ಯುಸೆಕ್ಸ್‌ನಷ್ಟಿದೆ. ಮುಖ್ಯ ನಾಲೆಯಲ್ಲಿ ಇನ್ನು ಮುಂದೆ ಬರತಕ್ಕಂಥ ಬೇಡಿಕೆಯ ಮೇಲೆ ಹತ್ತು ಸಾವಿರ ಕ್ಯೂಸೆಕ್ಸ್‌ನಷ್ಟು ಬಿಡಬೇಕಾಗುತ್ತದೆ.

ಶ್ರೀ ಬಿ.ಎಸ್.ಬಚ್ಚೇಗೌಡ:- ತತ್‌ಕ್ಷಣ ಕ್ರಮ ಕೈಗೊಂಡು ಮುಂದೆ ಬಿರುಕು ಬಿಟ್ಟುಕೊಳ್ಳದ ರೀತಿಯಲ್ಲಿ ಆ ಒಂದು ಕಾಮಗಾರಿ ಕೆಲಸವನ್ನು ತೆಗೆದುಕೊಳ್ಳುವಂಥ

ಕಾರ್ಯವನ್ನು ಮಾಡುತ್ತೇವೆ.

2. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಂದಿರಾ ಆವಾಸ್, ಅಂಬೇಡ್ಕರ್ ಮನೆ ಹಾಗೂ ದಶಲಕ್ಷಬಾವಿ ಯೋಜನೆಗಳಲ್ಲಿ ಮಂಜೂರಾದ ಹಣ ದುರುಪಯೋಗ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಸನ್ಮಾನ್ಯ ಉಪಾಧ್ಯಕ್ಷರೇ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಇಂದಿರಾ ಆವಾಸ್, ಅಂಬೇಡ್ಕರ್ ಮನೆ ಹಾಗೂ ದಶ ಲಕ್ಷ ಬಾವಿ ಯೋಜನೆಗಳಿಗೆ ಮಂಜೂರಾದ 15 ಲಕ್ಷ ರೂಪಾಯಿಗೂ ಹೆಚ್ಚು ಹಣ ದುರುಪಯೋಗವಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷರೇ, 1992-93 ಮತ್ತು 1993-94ನೇ ಸಾಲಿಗೆ ಸಂಬಂಧಿಸಿದಂತೆ, ಇಂದಿರಾ ಆವಾಜ್, ಅಂಬೇಡ್ಕರ್ ಮನೆ ಹಾಗೂ ದಶಲಕ್ಷ ಬಾವಿ ಯೋಜನೆಗಳ ಅನುಷ್ಠಾನದಲ್ಲಿ ದುರುಪಯೋಗವಾಗಿದೆ ಎನ್ನಲಾಗಿರುವ ಪ್ರಕರಣಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರಿಗೆ ಸ್ಥಳ ತನಿಖೆ ಮಾಡಿ, ವರದಿ ನೀಡಲು ಸೂಚಿಸಿರುತ್ತೇನೆ.

ತೀರ್ಥಹಳ್ಳಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಇಂದಿರಾ ಆವಾಜ್ ಯೋಜನೆ ಹಾಗೂ ದಶಲಕ್ಷ ಬಾವಿ ಯೋಜನೆಗಳಿಗೆ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಹಣದಲ್ಲಿ ಸುಮಾರು ರೂ. 10.00 ಲಕ್ಷ ಹಣವನ್ನು ಖರ್ಚು ಮಾಡದೆ ತೀರ್ಥಹಳ್ಳಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು ಬ್ಯಾಂಕಿನಲ್ಲಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕಾಮಗಾರಿಗಳ ಅನುಷ್ಠಾನದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರು ಸ್ಥಳ ತನಿಖೆ ಮಾಡಿದ್ದು, ಕಿಗಾಡಿ, ನೆಲ್ಲಿಸಾರ, ಕನ್ನಂಗಿ ಮತ್ತು ಇತರೆ ಗ್ರಾಮಗಳಲ್ಲಿ ಇಂದಿರಾ ಆವಾಜ್ ಮನೆಗಳು ಪೂರ್ಣವಾಗಿರುವುದಿಲ್ಲ. ಅಂದಾಜು ರೂ. 3.00 ಲಕ್ಷಕ್ಕೂ ಹೆಚ್ಚು ಹಣವನ್ನು ಕಾಮಗಾರಿ ಪೂರ್ಣಗೊಳ್ಳದೆ ಪಾವತಿ ಮಾಡಿರುವುದು ಕಂಡು ಬಂದಿದೆ. ಇದಕ್ಕೆ ಸಂಬಂಧಪಟ್ಟ ಬಿಲ್ಲುಗಳನ್ನು ಶ್ರೀ ಡಿ.ಟಿ.ಕೆಂಚಪ್ಪ, ಕಿರಿಯ ಅಭಿಯಂತರರು ಇವರು ತಯಾರಿಸಿದ್ದು ಮೇಲ್ನೋಟಕ್ಕೆ ಹಣ ದುರುಪಯೋಗದ ಪ್ರಕರಣವೆಂದು ಕಂಡುಬಂದಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರು ಸದರಿ ಕಿರಿಯ ಅಭಿಯಂತರರನ್ನು ದಿನಾಂಕ 27-5-95ರಂದು ಅಮಾನತ್ತಿನಲ್ಲಿಟ್ಟು ಇಲಾಖಾ ವಿಚಾರಣೆಗೆ ಆದೇಶ ಹೊರಡಿಸಿದ್ದಾರೆ. ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಸದರಿ ಕಿರಿಯ ಅಭಿಯಂತರರನ್ನು ದಿನಾಂಕ 12-10-95ರಂದು ಮರುನೇಮಕ ಮಾಡಿ ಸೊರಬ ತಾಲ್ಲೂಕಿಗೆ ವರ್ಗಾಯಿಸಲಾಗಿದೆ. ಇಲಾಖೆ ವಿಚಾರಣೆ ಪ್ರಗತಿಯಲ್ಲಿದೆ.